ನಿವಾರಣೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಸಿಬ್ಬಂದಿ ಕೊರತೆ ಕೂಡ ಇದೆಯೆಂದು ತಿಳಿದು ಬಂದಿದೆ. ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಸಲಕರಣೆಗಳ ಕೊರತೆ ಇದ್ದುದನ್ನು ಈಗ ನಿವಾರಿಸಿದ್ದೇವೆ, ಕಂಬ ಮತ್ತು ತಂತಿ ವಿಷಯದಲ್ಲಿ ಹೊಸದಾಗಿ ಆರ್ಡರ್ ನೀಡಲಾಗಿದೆ. ಆಗ್.ಇ.ಸಿ ಯೋಜನೆಯಲ್ಲಿ ಅವುಗಳನ್ನು ಪೂರೈಸುವ ಪ್ರಯತ್ನ ಮಾಡಲಾಗುವುದು. ಇನ್ನು ಸಿಬ್ಬಂದಿ ವರ್ಗ ಕಡಿಮೆ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಹೆಚ್ಚು ಸಿಬ್ಬಂದಿ ವರ್ಗವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಇಚ್ಛೆ ಇದೆ.

ಶ್ರೀ ಕೆ.ಬಿ. ಶಿವಯ್ಯ.—ನಮ್ಮಲ್ಲಿ ನುಗ್ಗು ಅಚ್ಚುಕಟ್ಟು ಪ್ರದೇಶದಲ್ಲಿ ಹಾಗೂ ಕಬಿನಿ ಕಾಲುವೆ ತೋಡುವ ಪ್ರದೇಶದಲ್ಲಿ ಕೆಲವು ಲೈನುಗಳನ್ನು ಹಾಕಿದ್ದು ಈಗ ಅವುಗಳ ಅವಶ್ಯಕತೆ ಇಲ್ಲದೆ ಅವುಗಳು ಐಡಲ್ ಲೈನುಗಳಾಗಿವೆ. ಇವುಗಳನ್ನು ಅಲ್ಲಿಂದ ತೆಗೆಯುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಕಂಬ ಮತ್ತು ತಂತಿ ಮೊದಲಾದ ಉಪಕರಣಗಳು ದೊರೆಯುತ್ತವೆ. ಈ ಎಲ್ಲಾ ಉಪಕರಣಗಳನ್ನು ತೆಗೆದುಕೊಂಡು ಮೇಲೆ ಹೇಳಿದ ಪ್ರದೇಶದಲ್ಲಿ ವಿದ್ಯುದ್ದೀಕರಣ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಕಬಿನಿ ಕಾಲುವೆ ಪ್ರದೇಶದಲ್ಲಿ ಈಗ ಪಂಪು ಸೆಟ್ಟುಗಳಿವೆ, ವಿದ್ಯುಚ್ಛಕ್ತಿ ಬೇಕಾಗಿಲ್ಲ. ಈ ಉಪಕರಣಗಳನ್ನು ತಂತಿ, ಕಂಬ ಮೊದಲಾದವುಗಳನ್ನು ನಂಜನಗೂಡು ಪ್ರದೇಶದಲ್ಲಿ ಬರತಕ್ಕಂಥ ಹಳ್ಳಿಗಳಿಗೆ ವಿದ್ಯುದ್ದೀಕರಣ ಮಾಡಲು ಬಳಸಿಕೊಳ್ಳುವುದು ಒಳ್ಳೆಯ ಸಲಹೆ. ಇವುಗಳನ್ನು ಏಳು ವರ್ಷಗಳವರೆಗೆ ತೆಗೆಯಬಾರದೆಂದು ನಿಯಮ ಇದ್ದರೂ ಕೂಡ, ಪ್ರಯೋಜನ ಇಲ್ಲವೆಂದಮೇಲೆ ಅವುಗಳನ್ನು ನಂಜನಗೂಡು ಮತ್ತು ಹಳ್ಳಿಗಳಿಗೆ ಉಪಯೋಗಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Mineral resources in Sindgi Taluk

1115. SRI M. H. BEKINALKAR(Sindgi).—Will the Chief Minister be pleased to state.

(a) whether they are aware that there is an element of cement in the stones available at Honnali, Taluk: Sindagi, District: Bijapur;

(b) whether any body has come forward to exploit the potential;

(c) whether the Government give encouragement to any private terpreneurs?

SRI R. GUNDU RAO (Chief Minister).—

(a) (b) & (c) The limestone deposits of Honnali Village in Sindgi Taluk, Bijapur District have not been investigated indetail yet. Since the Honnali area comes within the Bhima series of limestone extending from Talikot in Bijapur District; there is distinct likelihood of limestone deposits in the area. No enterpreneur has so far come forward to exploit the limestone deposit in the area. If any entrepreneur comes forward to exploit the mineral and set up an industry, all possible assistance will be extended by the State Government.

ಶ್ರೀ ಎಂ. ಎಚ್. ಬೆಕಿನಾಳ್ಕರ್.—ಸ್ವಾಮಿ, ಈ ಲೈಮ್‌ಸ್ಟೋನ್ ಪರ್ಸೆಂಟೇಜ್ ಎಷ್ಟು ಎಂದು ಹೇಳುವುದಕ್ಕೆ ಆಗುತ್ತದೆಯೆ ?

ಶ್ರೀ ಜಿ. ಮಾದೇಗೌಡ (ಮುಖ್ಯ ಮಂತ್ರಿಗಳ ಪರವಾಗಿ).—ಅದನ್ನು ಇನ್ನೂ ಸರ್ವೆ ಮಾಡಿಲ್ಲ ವೆಂದು ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಎಂ. ಎಚ್. ಬೆಕಿನಾಳ್ಕರ್.—ಈಗ ಸಿಂದಗಿಯಿಂದ ಶ್ರೀ ಶಶಿಕಾಂತ ಎಸ್. ಹಿರೇಮಠ ಎಂಬುವವರು ಅರ್ಜಿಯನ್ನು ಹಾಕಿಕೊಂಡಿದ್ದಾರೆ. ತಮ್ಮ ಉತ್ತರದಲ್ಲಿ ಯಾರಾದರೂ ಬಂದರೆ ಸರ್ವೆ ಮಾಡಿಸಿ ಸಹಾಯ ಮಾಡುತ್ತೇವೆ, ತಾಂತ್ರಿಕ ನೆರವು ಮತ್ತು ಆರ್ಥಿಕ ಸಹಾಯ ಮಾಡಲಾಗುವುದು ಎಂದು ಹೇಳಿದ್ದೀರಿ. ಇದನ್ನು ಎಷ್ಟರಮಟ್ಟಿಗೆ ಮಾಡುತ್ತೀರಿ ಸ್ವಾಮಿ ?

ಶ್ರೀ ಜಿ. ಮಾದೇಗೌಡ.—ಈ ಪಶ್ನೆ ಬಂದಮೇಲೆ ಒಂದು ಅರ್ಜಿ ಬಂದಿದೆ ಎಂದು ಕೇಳಿದ್ದೇನೆ. ಸಿಮೆಂಟ್ ತಯಾರು ಮಾಡಬೇಕಾದರೆ ೪೮ ಪರ್ಸೆಂಟ್ ಕ್ಯಾಲ್ಸಿಯಂ ಇರಬೇಕು, ೬ ಪರ್ಸೆಂಟ್ ಸಿಲಿಕಾನ್ ಆಕ್ಸೈಡ್, ೩ ಪರ್ಸೆಂಟ್ ಮ್ಯಾಂಗನೀಸ್ ಆಕ್ಸೈಡ್ ಇರಬೇಕಾಗುತ್ತದೆ. ಇದನ್ನು ತಯಾರಿಸಲು ಯಾರಾದರೂ ಬಂದು ಅರ್ಜಿ ಹಾಕಿಕೊಂಡರೆ ಅದನ್ನು ಉಚಿತವಾಗಿ ಕೊಡುವುದಕ್ಕೆ ತೊಂದರೆ ಏನೂ ಇಲ್ಲ.

ಶ್ರೀ ಎಂ. ಎಚ್ ಬೆಕಿನಾಳ್ಕರ್.—ನನಗೆ ತಿಳಿದ ಪ್ರಕಾರ ಈ ಜಾಗದಲ್ಲಿ ಒಂದು ಸಾವಿರ ಎಕರೆಗೆ ಮೇಲ್ಪಟ್ಟು ಲೈಮ್‌ಸ್ಟೋನ್ ಸಿಗುವ ಸಾಧ್ಯತೆ ಇದೆ. ಸರ್ಕಾರಿ ಕ್ಷೇತ್ರದಲ್ಲಿ ಸಿಮೆಂಟ್ ಫ್ಯಾಕ್ಟರಿ ತೆಗೆಯಲು ಸಾಧ್ಯವಾಗುತ್ತದೆಯೆ ?

ಶ್ರೀ ಜಿ. ಮಾದೇಗೌಡ.—ಈ ಭಾಗದಲ್ಲಿ ಸರಿಯಾಗಿ ಸರ್ವೆ ಆಗಿಲ್ಲವೆಂದು ಮೊದಲೇ ಹೇಳಿದ್ದೇನೆ. ಈ ವರ್ಷ ಸರ್ವೆ ಮಾಡಿಸುತ್ತಿದ್ದೇವೆ. ಸಿಮೆಂಟ್ ಉತ್ಪಾದನೆಗೆ ೪೮ ಪರ್ಸೆಂಟ್ ಲೈಮ್‌ಸ್ಟೋನ್ ಇರಬೇಕಾಗಿರುವಾಗ, ಆ ಪ್ರದೇಶದಲ್ಲಿ ಆ ಪ್ರಮಾಣದಲ್ಲಿ ಅದು ಸಿಗುವ ಹಾಗಿದ್ದರೆ ಖಾಸಗಿಯಾಗಿ ಬಂದರೂ ಕೊಡುತ್ತೇವೆ ಮತ್ತು ಸರ್ಕಾರದ ವಲಯದಿಂದ ಕೊಡುವುದಕ್ಕೂ ಕೂಡ ಬರುತ್ತದೆ. ಯಾವುದಕ್ಕೂ ಸರ್ವೆ ಆದಮೇಲೆ ಏನು ತೀರ್ಮಾನ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

Construction of C. I. Wells in Bidar District

454. SRI BHIMANNA KHANDRE (Bhalki).—Will the Minister for Rural Development and Panchayat Raj be pleased to state.—

(a) the No. of C.I. wells which construction work was taken up since 1972–75 in Bidar District ;

(b) the No. of such irrigation wells completed/not completed ;

(c) the estimated expenditure of each of such wells, expenditur so far incurred (village–wise and Taluk–wise details to be furnished);

(d) whether any representations have been received for completion of these wells ?

SRI B. RAMAIAH (Minister for Rural Development and Panchayat Raj).—

(a) 61 C. I. Wells

(b) (1) 28 wells completed. Out of 21 C.I. Wells completed. 3 wells collapsed.

(2) 33 wells yet to be completed.